# ಆದಿತ್ಯ

ಮೂಡಣ ಬೆಟ್ಟದ ಸಾಲ್ಗಳ ನಡುವೆ
ಮೂಡಿದ ಕೆಂಪಗೆ ಆದಿತ್ಯ
ನಾಡಿನ ಜನತೆಗೆ ಬೆಳಕನು ನೀಡಲು
ಓಡಿದ ಮೇಲ್ಗಡೆ ಆದಿತ್ಯ

ಅಡವಿಯಲಡಗಿಹ ಗಿಡಮರಗಳ
ಒಡಲಿನ ದ್ಯುತಿ ಸಂಶ್ಲೇಷಣೆಗಾದಿತ್ಯ
ತಡಮಾಡದೆ ಭರಪೂರ ಚೆಲ್ಲುತ
ಕುಡಿಕಿರಣಗಳನೆಸೆದನು ಆದಿತ್ಯ

ಮಳೆಯನು ನಂಬಿದ ತರುಲತೆಗಾಗಿಯೆ
ಕಳಕಳಿಯಿಂದಲಿ ಆದಿತ್ಯ
ಜಲಧಿಯ ಚುಂಬಿಸಿ ಆವಿಯ ಬರಿಸಿದ
ಮಳೆಮುಗಿಲನು ತರಿಸಿದ ಆದಿತ್ಯ

ಗಾವುದ ದೂರದ ಓಟಕೆ ಬೆವರಿದ
ಕಾವನು ತಣಿಸಲು ಆದಿತ್ಯ
ಯಾವುದೊ ಪಡುವಣ ಶರಧಿಗೆ ಜಾರಿದ
ತಾವನು ಹುಡುಕುತ ಆದಿತ್ಯ

ಪಡುವಣ ಸಾಗರದಡಿಯಲಿ ಇಹುದೇ
ಬಿಡಾರ ನಿನ್ನದು ಆದಿತ್ಯ?
ಹುಡುಕುತ ಮತ್ತೇಕಡಗುವೆ ಅಲ್ಲಿ
ಸಡಗರದಲಿ ನೀನು ಆದಿತ್ಯ?

**- ಕಿಗ್ಗಾಲು ಎಸ್.ಗಿರೀಶ್**



# ಉಪಕಾರ ಸ್ಮರಣೆ

ಒಂದು ಕಾಡಿನಲ್ಲಿ ಸಿಂಹವೊಂದರ ಕಾಲಿಗೆ ದೊಡ್ಡದಾದ ಮುಳ್ಳು ಚುಚ್ಚಿಕೊಂಡು ಬಿಟ್ಟಿತು. ನಡೆದಾಡಲೂ ಆಗದೆ ನೋವನ್ನು ಅನುಭವಿಸುತ್ತಾ ರೋದಿಸುತ್ತಿತ್ತು. ಅದು ದೂರದಲ್ಲಿ ಒಬ್ಬ ಕುರುಬ ಬರುತ್ತಿದ್ದುದನ್ನು ಗಮನಿಸಿತು. ಕುಂಟುತ್ತಾ ಮೆಲ್ಲಗೆ ಅವನ ಬಳಿಗೆ ಬರಲು ಪ್ರಯತ್ನಿಸುತ್ತಿತ್ತು. ಕುರುಬನು ಸಿಂಹವು ತನ್ನ ಬಳಿಗೆ ಬರುತ್ತಿರುವುದನ್ನು ಕಂಡು ತುಂಬಾ ಭಯಪಟ್ಟುಕೊಂಡು ಓಡಿ ತಪ್ಪಿಸಿಕೊಳ್ಳಲೂ ಆಗದೆ ಪರಿತಪಿಸುತ್ತಾ ನಿಂತು ಬಿಟ್ಟನು. ಸಿಂಹವು ಸೀದಾ ಆತನ ಬಳಿಗೆ ಬಂದು, ತನ್ನ ಕಾಲನ್ನು ಅವನ ಮುಂದಕ್ಕೆ ಚಾಚಿತು. ಸಿಂಹವು ಈಗ ಗರ್ಜಿಸಲೂ ಇಲ್ಲ, ಗುರುಗುಟ್ಟಲೂ ಇಲ್ಲ. ಕಾಲನ್ನು ಚಾಚಿದ್ದರಿಂದ ಮುಳ್ಳನ್ನು ತೆಗೆಯಲು ತನ್ನ ಸಹಾಯವನ್ನು ಕೇಳುತ್ತಿದೆ ಎಂದು ತಿಳಿದು ಜಾಗರೂಕತೆ ವಹಿಸಿ ಸಿಂಹದ ಕಾಲಿನಲ್ಲಿ ಚುಚ್ಚಿಕೊಂಡಿದ್ದ ಮುಳ್ಳನ್ನು ಧೈರ್ಯದಿಂದ ತೆಗೆದು ಹಾಕಿದನು. ನಂತರ ಸಿಂಹವು ತನ್ನ ಪಾಡಿಗೆ ತಾನು ಕಾಡಿನ ಒಳಗಡೆಗೆ ಹೊರಟುಹೋಯಿತು.

ಕೆಲವು ದಿನಗಳಾದ ನಂತರ ರಾಜನ ಮನೆಯಲ್ಲಿ ಕಳ್ಳತನವಾಯಿತು. ಕುರುಬನಿಗೆ ಆಗದ ಕೆಲವರು ಈ ಕಳ್ಳತನವನ್ನು ಕುರುಬನೇ ಮಾಡಿದ್ದಾನೆಂದು ರಾಜನಿಗೆ ದೂರು ಕೊಟ್ಟರು. ರಾಜ ಕುರುಬನನ್ನು ಸೆರೆಯಲ್ಲಿಟ್ಟನು. ಕಳ್ಳತನವಾಗಿದ್ದ ವಸ್ತುಗಳನ್ನು ಕುರುಬನ ಮನೆಯಲ್ಲಿ ಶೋಧಿಸಿದಾಗ ಏನೂ ಸಿಗಲಿಲ್ಲ. ಆದರೂ ಕುರುಬನೇ ಬೇರೆ ಎಲ್ಲೋ ಮುಚ್ಚಿಟ್ಟಿರಬಹುದು ಎಂದು ಶಂಕಿಸಿ ಸೆರೆಯಲ್ಲಿರುವ ಕುರುಬನಿಗೆ ಸರಿಯಾದ ಶಿಕ್ಷೆ ವಿಧಿಸಬೇಕೆಂದು ತೀರ್ಮಾನವಾಯಿತು. ಅದರಂತೆ ಅವನನ್ನು ಸಿಂಹದ ಬಾಯಿಗೆ ಆಹಾರವಾಗಿ ಎಸೆಯಬೇಕೆಂದು ರಾಜ ಆಜ್ಞೆ ಇತ್ತ.

ಕಾಡಿನಿಂದ ಸಿಂಹವನ್ನು ಹಿಡಿದು ತರಲಾಯಿತು. ಕುರುಬನ ಅದೃಷ್ಟವೆಂದರೆ ಯಾವ ಸಿಂಹದ ಕಾಲಿನ ಮುಳ್ಳನ್ನು ತೆಗೆದಿದ್ದನೋ ಆ ಸಿಂಹವೇ ಇವನ ಜೀವ ತೆಗೆಯಲು ಬಂದಿತ್ತು. ಆದರೆ ಸಿಂಹವನ್ನು ಕುರುಬನ ಎದುರು ಬಿಟ್ಟಾಗ ಅವನನ್ನು ಕೊಂದು ತಿನ್ನುವ ಬದಲು ಆ ಸಿಂಹವು ಕುರುಬನ ಎದುರಿಗೆ ತನ್ನ ಬಾಲವನ್ನು ಅಲ್ಲಾಡಿಸುತ್ತಾ ಅವನ ಕೈಗಳನ್ನು ನೆಕ್ಕಿತು! ರಾಜ ಇದನೆಲ್ಲಾ ಆಶ್ಚರ್ಯದಿಂದ ನೋಡುತ್ತಲೇ ಇದ್ದ. ಸಿಂಹವು ಕುರುಬ ಮಾಡಿದ ಸಹಾಯಕ್ಕೆ ಕೃತಜ್ಞತೆ ಅರ್ಪಿಸುತ್ತಿದೆ ಎಂಬುದನ್ನು ಕುರುಬನಿಂದಲೇ ತಿಳಿದು ಅವನನ್ನು ಬಿಡುಗಡೆ ಮಾಡಿದ. ಸಿಂಹದಂತಹ ಭಯಂಕರ ಕ್ರೂರ ಪ್ರಾಣಿಗಳೂ ಉಪಕಾರ ಸ್ಮರಣೆಯನ್ನು ಮಾಡುತ್ತವೆ ಎಂಬುದನ್ನು ರಾಜನು ಮನಗಂಡನು.

**(ಸಂಗ್ರಹ) ಸಿದ್ದೇಶ್**
**ಸಣ್ಣಗಿರಿ**

